ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ

ಸ್ಪೆಷಲ್ ಕೇಸ್ ನಂಃ 140/2015

ಚಾಸಾ - 9 ಪ್ರಾಸಾ - 6 ದಿನಾಂಕ :- 18.03.2021
ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಹೆಸರು | : | ಪ್ರಕಾಶ್ ಕುಮಾರ್ |
| ತಂದೆಯ ಹೆಸರು | : | ಮುಂಡಪ್ಪ |
| ವಯಸ್ಸು | : | 63 ವರ್ಷ |
| ಉದ್ಯೋಗ | : | ನಿವೃತ ಶಾಖಾಧಿಕಾರಿ,<br>ಕಾರ್ಪೋರೇಷನ್ ಬ್ಯಾಂಕ್,<br>ಹಾಸನ ಮುಖ್ಯ ಶಾಖೆ, ಹಾಸನ. |
| ವಾಸ | : | ಮಂಗಳೂರು. |

**ಮುಖ್ಯ ವಿಚಾರಣೆಃ ಸರ್ಕಾರದ ಪರ** ಸ್ಪೆಷಲ್ ಪಿಪಿ ರವ**ರಿಂದಃ**

ನಾನು ಅಕ್ಟೋಬರ್-2012 ರಿಂದ ಮೇ-2014 ರವರೆಗೆ ಹಾಸನದ ಎನ್.ಆರ್.ವೃತ್ತ ದಲ್ಲಿರುವ ಕಾರ್ಪೋರೇಷನ್ ಬ್ಯಾಂಕ್ ಶಾಖೆಯಲ್ಲಿ ಚೀಫ್ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿಃ- **20-08-2013** ರಂದು ಪೊಲೀಸ್ ಉಪ ನಿರೀಕ್ಷಕರು ಕರ್ನಾಟಕ ಲೋಕಾಯುಕ್ತ , ಹಾಸನ ರವರಿಂದ ಒಂದು ಪತ್ರ ಬಂದಿದ್ದು ಸದರಿ ಪತ್ರದಲ್ಲಿ ಸಿಆರ್ ಮಂಜುನಾಥ್ ರವರ ಖಾತೆಯ ಬಗ್ಗೆ ನಮಗೆ ಮಾಹಿತಿ ಕೇಳಿದ್ದರು. ನಾನು ದಿಃ- **23-08-2013** ರಂದು ಲೋಕಾಯುಕ್ತ ಪೊಲೀಸ್, ಹಾಸನ ರವರಿಗೆ ಪತ್ರದ ಮೂಲಕ ಉತ್ತರ ನೀಡಿದ್ದೇನೆ ಸದರಿ ಮಂಜುನಾಥ್ ರವರು **2000** ಇಸವಿಯಿಂದ ನಮ್ಮ ಬ್ಯಾಂಕಿನಲ್ಲಿ ಖಾತೆಯನ್ನು ಹೊಂದಿದ್ದಾರೆ. ಅವರು ನಮ್ಮ ಬ್ಯಾಂಕಿನಿಂದ ಯಾವುದೇ ನಮೂನೆಯ ಸಾಲವನ್ನು ಪಡೆದಿಲ್ಲ. ಅವರ ಬ್ಯಾಂಕ್ **Statement 2005** ರಿಂದ **2013** ರ ತನಕ ಕಂಪ್ಯೂಟರ್ ಶೀಟ್ ನಲ್ಲಿ **Statement** ನ್ನು ತೆಗೆದುಕೊಂಡು ನಮ್ಮ ಪತ್ರದ ಜೊತೆಯಲ್ಲಿ ಲೋಕಾಯುಕ್ತ ಪೊಲೀಸರಿಗೆ ಕಳುಹಿಸಿದ್ದೇನೆ

3. ಈಗ ತೋರಿಸಿದ ದಿಃ-**23-08-2013** ರ ಪತ್ರವನ್ನು ನೋಡಿದೆನು ಸದರಿ ಪತ್ರವನ್ನು ನಿಶಾನೆ ಪಿ-**70** ಎಂದು ಗುರುತಿಸಲಾಯಿತು. ಅದರಲ್ಲಿರುವ ಸಹಿ ನೋಡಿದೆ. ಅದು ನನ್ನ ಸಹಿ.

ಸಾಕ್ಷಿಯ ಸಹಿಯನ್ನು ನಿಶಾನೆ ಪಿ-**70**(ಎ) ಎಂದು ಗುರುತಿಸಲಾಯಿತು.

4. ಈಗ ತೋರಿಸಿದ **Bank Statement** ನ್ನು ನೋಡಿದೆನು. ಅದು ಕಂಪ್ಯೂಟರೈಸ್ಡ್ ಪ್ರತಿ ಆಗಿದೆ.

**At this stage, the defense counsel Sri. CNV has raised the objection that, the said documents can not be admitted in evidence, since the said documents are not accompanied with certificate as required U/Sec. 65(4) (B) of Evidence Act.**

**The Spl.PP submits that, the said documents may be marked subject to objection.**

**The Defence counsel submits that, it is necessary to give findings about marking of said documents before marking the said documents said Exhibits.**

**The spl.PP prays time for arguments for admissibility of said documents. Hence, further chief examination is deferred.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

***ಓ.ಹೇ.ಕೇ.ಸ.ಇದೆ.***

***ಸಹಿ/-***

***ಪ್ರಧಾನ ಜಿಲ್ಲಾ** ಮತ್ತು ಸೆಷನ್ಸ್ ಹಾಗೂ ಸ್ಪೆಷಲ್*
***ನ್ಯಾಯಾಧೀಶರು, ಹಾಸನ.***